# Karnataka State Govt. Reservation Policy – Original and Translated Versions.

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ಭಾರತ ಸಂವಿಧಾನದ ಅನುಚ್ಛೇದ 16(4)ರ ಅನ್ವಯ ಮೀಸಲಾತಿ ಕಲ್ಪಿಸುವ ಬಗ್ಗೆ.

ಓದಲಾಗಿದೆ:

(1) ದಿನಾಂಕ: 31.01.1995ರ ಸರ್ಕಾರದ ಆದೇಶ ಸಂಖ್ಯೆ: ಸಕಇ 251 ಬಿಸಿಎ 94.
(2) ದಿನಾಂಕ: 20.06.1995ರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 8 ಸೆಹಿಮ 95.
(3) ದಿನಾಂಕ: 23.10.2022ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 29 ಶಾಸನ 2022.
(4) ದಿನಾಂಕ: 31.10.2022ರ ಅಧಿಸೂಚನೆ ಸಂಖ್ಯೆ: ಸಕಇ 84 ಎಸ್‌ಟಿಪಿ 2021.

**ಪ್ರಸ್ತಾವನೆ:**

ಮೇಲೆ (1) ರಲ್ಲಿ ಓದಲಾದ ದಿನಾಂಕ: 31.01.1995ರ ಸರ್ಕಾರದ ಆದೇಶದಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮತ್ತು ಸರ್ಕಾರದ ಅಧೀನದಲ್ಲಿ ಬರುವ ಅಂಗ ಸಂಸ್ಥೆಗಳಲ್ಲಿನ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ಹಿಂದುಳಿದ ವರ್ಗದವರಿಗೆ ಮೀಸಲಿಡಬಹುದಾದ ಮೀಸಲಾತಿ ಪ್ರಮಾಣವನ್ನು ಶೇಕಡಾ 50ಕ್ಕೆ ನಿಗದಿಪಡಿಸಲಾಯಿತು. ಈ ಹಿನ್ನೆಲೆಯಲ್ಲಿ, ಭಾರತ ಸಂವಿಧಾನದ ಅನುಚ್ಛೇದ 16(4) ರ ಪ್ರಕಾರ ಸದರಿ ಮೀಸಲಾತಿಯನ್ನು ಜಾರಿಗೊಳಿಸಲು ಅಳವಡಿಸಬೇಕಾದ ರೋಸ್ಟರ್ ಬಗ್ಗೆ ಪರಿಶೀಲಿಸಿ, ಮೇಲೆ (2) ರಲ್ಲಿ ಓದಲಾದ ದಿನಾಂಕ: 20.06.1995ರ ಸರ್ಕಾರದ ಆದೇಶದ ಅನುಬಂಧ-1 ರಲ್ಲಿ 100 ಬಿಂದುಗಳ ಒಂದು ರೋಸ್ಟರನ್ನು ನಿಗದಿಪಡಿಸಲಾಯಿತು. ಸದರಿ ರೋಸ್ಟರಿನಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳಿಗಾಗಿ ನಿಗದಿಪಡಿಸಿದ ಮೀಸಲಾತಿ ಪ್ರಮಾಣಕ್ಕೆ ಅನುಗುಣವಾಗಿ ಭರ್ತಿ ಮಾಡಬೇಕಾದ ರಿಕ್ತಸ್ಥಾನಗಳಿಗೆ ಬಿಂದುಗಳನ್ನು ಗೊತ್ತುಪಡಿಸಲಾಗಿರುತ್ತದೆ.

2. ಮೇಲೆ (3)ರಲ್ಲಿ ಓದಲಾದ ದಿನಾಂಕ: 23.10.2022ರ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ

ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಅಧ್ಯಾದೇಶ, 2022ನ್ನು ಹೊರಡಿಸಲಾಗಿರುತ್ತದೆ. ಮೇಲೆ (4)ರಲ್ಲಿ ಓದಲಾದ ದಿನಾಂಕ: 31.10.2022ರ ಅಧಿಸೂಚನೆ ಸಂಖ್ಯೆ: ಸಕಇ 84 ಎಸ್‌ಟಿಪಿ 2021 ರಲ್ಲಿ, ಸದರಿ ಅಧ್ಯಾದೇಶದ 1ನೇ ಪ್ರಕರಣದ (2)ನೇ ಉಪ ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅಧ್ಯಾದೇಶದಲ್ಲಿನ ಎಲ್ಲಾ ಉಪಬಂಧಗಳು ದಿನಾಂಕ: 01.11.2022 ರಿಂದ ಜಾರಿಗೆ ಬರತಕ್ಕದ್ದೆಂದು ಗೊತ್ತುಪಡಿಸಲಾಗಿರುತ್ತದೆ.

3. ಸದರಿ ಅಧ್ಯಾದೇಶ 2022ರ 4ನೇ ಪ್ರಕರಣದಲ್ಲಿ, ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವುದನ್ನು ಗಮನದಲ್ಲಿರಿಸಿಕೊಂಡು ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಿಗೆ ಸಂಬಂಧಿಸಿದಂತೆ ಮೀಸಲಾತಿಯನ್ನು ಶೇಕಡ 15 ರಿಂದ ಶೇಕಡ 17 ರಷ್ಟಕ್ಕೆ ಹಾಗೂ ಶೇಕಡ 3 ರಿಂದ ಶೇಕಡ 7ರಷ್ಟಕ್ಕೆ ಅನುಕ್ರಮವಾಗಿ ಹೆಚ್ಚಿಸಲಾಗಿರುತ್ತದೆ.

4. ಮೇಲೆ ವಿವರಿಸಿದ ಸಂದರ್ಭಗಳ ಹಿನ್ನೆಲೆಯಲ್ಲಿ, ದಿನಾಂಕ: 20.06.1995ರ ಸರ್ಕಾರದ ಆದೇಶದ ಅನುಬಂಧ-1 ರಲ್ಲಿ ನಿಗದಿಪಡಿಸಿರುವ ರೋಸ್ಟರನ್ನು ಮಾರ್ಪಡಿಸುವ ಸಂದರ್ಭ ಒದಗಿ ಬಂದಿರುತ್ತದೆ. ಅದರಂತೆ, ಈ ಕೆಳಕಂಡ ಆದೇಶ.

**<u>ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 01 ಸಹಿಮ 2022, ಬೆಂಗಳೂರು, ದಿನಾಂಕ: 28.12.2022</u>**

5. ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ದಿನಾಂಕ: 23.10.2022ರ ಅಧಿಸೂಚನೆಯಲ್ಲಿ ಹೊರಡಿಸಲಾದ ಅಧ್ಯಾದೇಶದಲ್ಲಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ನೇಮಕಾತಿಯಲ್ಲಿ ನಿಗದಿಪಡಿಸಲಾದ ಹೆಚ್ಚಿನ ಮೀಸಲಾತಿ ಪ್ರಮಾಣಕ್ಕೆ ಅನುಗುಣವಾಗಿ ನೇರ ನೇಮಕಾತಿ ಮುಖಾಂತರ ಭರ್ತಿಮಾಡಬೇಕಾದ ರಿಕ್ತಸ್ಥಾನಗಳಿಗೆ ಬಿಂದುಗಳನ್ನು ಗುರುತಿಸಿ, ದಿನಾಂಕ: 20.06.1995ರ ಸರ್ಕಾರದ ಆದೇಶದ ಅನುಬಂಧ-1 ರಲ್ಲಿನ 100 ಬಿಂದುಗಳ ರೋಸ್ಟರನ್ನು ಈ ಆದೇಶದ ಅನುಬಂಧದಲ್ಲಿರುವ ಪರಿಷ್ಕೃತ ರೋಸ್ಟರಿಂದ ಪ್ರತಿಸ್ಥಾಪಿಸಲಾಗಿದೆ.

6. ಉಳಿದಂತೆ, ದಿನಾಂಕ: 20.06.1995ರ ಸರ್ಕಾರದ ಆದೇಶದಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

..3..

7. ಈ ಆದೇಶವು ತಕ್ಷಣದಿಂದ ಜಾರಿಗೆ ಬರುತ್ತದೆ. ಆದರೆ, ಯಾವುದೇ ವೃಂದದ ಹುದ್ದೆಗಳಿಗೆ ಈಗಾಗಲೇ ನೇರ ನೇಮಕಾತಿ ಪ್ರಕ್ರಿಯೆಯು ಪ್ರಾರಂಭಗೊಂಡಿದ್ದು, ಆ ನೇಮಕಾತಿ ಪ್ರಕ್ರಿಯೆಯು ಈ ಆದೇಶದ ದಿನಾಂಕದಂದು ಬಾಕಿ ಇದ್ದಲ್ಲಿ, ಅಂತಹ ನೇರ ನೇಮಕಾತಿ ಪ್ರಕ್ರಿಯೆಯನ್ನು ದಿನಾಂಕ: 20.06.1995ರ ಸರ್ಕಾರದ ಆದೇಶದ ಅನುಬಂಧ-1 ರಲ್ಲಿ ಗೊತ್ತುಪಡಿಸಿದ ರೋಸ್ಟರನ್ನು ಅನುಸರಿಸಿ ಪೂರ್ಣಗೊಳಿಸತಕ್ಕದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವೀರಭದ್ರ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು-1).

ಇವರಿಗೆ
ಸಂಕಲನಕಾರರು, ಇ-ರಾಜ್ಯಪತ್ರ

ಪ್ರತಿ
1 ಪ್ರಧಾನ ಮಹಾಲೇಖಪಾಲರು, (ಜಿ&ಎಸ್‌ಎಸ್‌ಎ), (ಇ &ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2 ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಬೆಂಗಳೂರು
3 ಸರ್ಕಾರದ ಮುಖ್ಯ ಕಾರ್ಯದರ್ಶಿಯವರು.
4 ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರು.
5 ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಯವರು/ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
6 *ನಿವಾಸಿ ಆಯುಕ್ತರು, ಕರ್ನಾಟಕ ಭವನ, ಕೌಟಿಲ್ಯ ಮಾರ್ಗ, ನವದೆಹಲಿ.
7 *ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ ವಿಧಾನ ಪರಿಷತ್ತು, ಬೆಂಗಳೂರು.
8 *ಮಹಾನಿಬಂಧಕರು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
9 *ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು
10 *ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು
11 *ನಿಬಂಧಕರು, ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, 6 ಮತ್ತು 7ನೇ ಮಹಡಿ, ಕಂದಾಯ ಭವನ, ಕೆ.ಜಿ. ರಸ್ತೆ, ಬೆಂಗಳೂರು 560009
12 *ನಿಬಂಧಕರು, ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣ, ಬಹುಮಹಡಿ ಕಟ್ಟಡ, ಬೆಂಗಳೂರು.
13 ಎಲ್ಲಾ ಇಲಾಖಾ ಮುಖ್ಯಸ್ಥರು
14 ಎಲ್ಲಾ ಪ್ರಾದೇಶಿಕ ಆಯುಕ್ತರು/ ಜಿಲ್ಲಾಧಿಕಾರಿಗಳು/ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು, ಜಿಲ್ಲಾ ಪಂಚಾಯತ್.
15 ಎಲ್ಲಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು
16 ಸರ್ಕಾರದ ಜಂಟಿ ಕಾರ್ಯದರ್ಶಿ (ಸಚಿವ ಸಂಪುಟ) (ವಿಷಯ ಸಂಖ್ಯೆ.713/2022)
17 ಸರ್ಕಾರದ ಎಲ್ಲಾ ವಿಶೇಷ/ ಅಪರ/ ಜಂಟಿ/ ಉಪ/ ಅಧೀನ ಕಾರ್ಯದರ್ಶಿಗಳು
18 ಶಾಖಾ ರಕ್ಷಾ ಕಡತ/ ಅಧಿಕ ಪ್ರತಿಗಳು
(*ಮುಖಪತ್ರದೊಂದಿಗೆ)

## **ಅನುಬಂಧ**

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 01 ಸೆಹಿಮ 2022 ದಿನಾಂಕ: 28 12.2022

| | | | | | | | |
|---|---|---|---|---|---|---|---|
| 01 | **ಪ.ಜಾ.** | 26 | ಸಾ.ಅ | 51 | ಪ್ರವರ್ಗ-II(ಎ) | 76 | ಸಾ.ಅ. |
| 02 | ಸಾ.ಅ. | 27 | **ಪ.ಜಾ.** | 52 | ಸಾ.ಅ. | 77 | ಪ್ರವರ್ಗ-II(ಎ) |
| 03 | ಪ.ಪಂ | 28 | ಸಾ.ಅ | 53 | **ಪ.ಜಾ.** | 78 | ಪ.ಪಂ. |
| 04 | ಸಾ.ಅ. | 29 | ಪ್ರವರ್ಗ-II(ಎ) | 54 | ಸಾ.ಅ. | 79 | ಪ್ರವರ್ಗ-I |
| 05 | ಪ್ರವರ್ಗ-I | 30 | ಸಾ.ಅ. | 55 | ಪ್ರವರ್ಗ-II(ಎ) | 80 | ಸಾ.ಅ. |
| 06 | ಸಾ.ಅ. | 31 | ಪ್ರವರ್ಗ-I | 56 | ಸಾ.ಅ. | 81 | **ಪ.ಜಾ.** |
| 07 | ಪ್ರವರ್ಗ-II(ಎ) | 32 | ಪ.ಪಂ | 57 | ಪ್ರವರ್ಗ-I | 82 | ಸಾ.ಅ. |
| 08 | ಸಾ.ಅ. | 33 | **ಪ.ಜಾ.** | 58 | ಸಾ.ಅ. | 83 | ಪ್ರವರ್ಗ-III(ಬಿ) |
| 09 | **ಪ.ಜಾ.** | 34 | ಸಾ.ಅ. | 59 | **ಪ.ಜಾ.** | 84 | ಸಾ.ಅ. |
| 10 | ಸಾ.ಅ. | 35 | ಪ್ರವರ್ಗ-II(ಬಿ) | 60 | ಸಾ.ಅ. | 85 | ಪ್ರವರ್ಗ-II(ಎ) |
| 11 | ಪ್ರವರ್ಗ-II(ಬಿ) | 36 | ಸಾ.ಅ. | 61 | ಪ್ರವರ್ಗ-II(ಬಿ) | 86 | ಸಾ.ಅ. |
| 12 | ಸಾ.ಅ. | 37 | ಪ್ರವರ್ಗ-II(ಎ) | 62 | ಪ.ಪಂ. | 87 | ಪ್ರವರ್ಗ-II(ಬಿ) |
| 13 | ಪ್ರವರ್ಗ-II(ಎ) | 38 | ಸಾ.ಅ. | 63 | ಪ್ರವರ್ಗ-II(ಎ) | 88 | ಸಾ.ಅ. |
| 14 | ಸಾ.ಅ. | 39 | ಪ.ಪಂ | 64 | ಸಾ.ಅ. | 89 | **ಪ.ಜಾ.** |
| 15 | **ಪ.ಜಾ.** | 40 | ಸಾ.ಅ. | 65 | ಪ್ರವರ್ಗ-III(ಬಿ) | 90 | ಸಾ.ಅ. |
| 16 | ಸಾ.ಅ. | 41 | **ಪ.ಜಾ.** | 66 | ಸಾ.ಅ. | 91 | ಪ್ರವರ್ಗ-II(ಎ) |
| 17 | ಪ್ರವರ್ಗ-III(ಎ) | 42 | ಸಾ.ಅ. | 67 | **ಪ.ಜಾ.** | 92 | ಸಾ.ಅ. |
| 18 | ಪ.ಪಂ | 43 | ಪ್ರವರ್ಗ-III(ಬಿ) | 68 | ಸಾ.ಅ. | 93 | **ಪ.ಜಾ.** |
| 19 | ಪ್ರವರ್ಗ-III(ಬಿ) | 44 | ಸಾ.ಅ. | 69 | ಪ್ರವರ್ಗ-II(ಎ) | 94 | ಸಾ.ಅ. |
| 20 | ಸಾ.ಅ. | 45 | ಪ್ರವರ್ಗ-II(ಎ) | 70 | ಸಾ.ಅ. | 95 | ಪ್ರವರ್ಗ-III(ಎ) |
| 21 | ಪ್ರವರ್ಗ-II(ಎ) | 46 | **ಪ.ಜಾ.** | 71 | ಪ.ಪಂ | **96** | **ಪ.ಜಾ.** |
| 22 | ಸಾ.ಅ. | 47 | ಪ್ರವರ್ಗ-III(ಎ) | 72 | ಸಾ.ಅ. | 97 | ಪ್ರವರ್ಗ-II(ಎ) |
| 23 | **ಪ.ಜಾ.** | 48 | ಸಾ.ಅ. | 73 | ಪ್ರವರ್ಗ-III(ಎ) | 98 | ಸಾ.ಅ. |
| 24 | ಸಾ.ಅ. | 49 | **ಪ.ಜಾ.** | 74 | ಸಾ.ಅ. | 99 | ಪ್ರವರ್ಗ-III(ಬಿ) |
| 25 | ಪ್ರವರ್ಗ-II(ಎ) | 50 | ಸಾ.ಅ. | 75 | **ಪ.ಜಾ.** | 100 | ಸಾ.ಅ. |

## ಸ್ಪಷ್ಟೀಕರಣ

| | | ಶೇಕಡವಾರು ಮೀಸಲಾತಿ |
|---|---|---|
| I | ಪ್ರವರ್ಗ- I | 4 |
| II(ಎ) | ಪ್ರವರ್ಗ- II(ಎ) | 15 |
| II(ಬಿ) | ಪ್ರವರ್ಗ-II(ಬಿ) | 4 |
| III(ಎ) | ಪ್ರವರ್ಗ- III(ಎ) | 4 |
| III(ಬಿ) | ಪ್ರವರ್ಗ-III(ಬಿ) | 5 |
| ಪ.ಜಾ. | ಪರಿಶಿಷ್ಟ ಜಾತಿ | 17 |
| ಪ.ಪಂ. | ಪರಿಶಿಷ್ಟ ಪಂಗಡ | 7 |
| ಸಾ.ಅ. | ಸಾಮಾನ್ಯ ಅರ್ಹತೆ | 44 |
| | ಒಟ್ಟು | 100 |

PRINCIPAL
R.B.A.N.M'S First Grade College
No. 12, Annaswamy Mudaliar Road,
BANGALORE - 560 042.
Mob : 8048533572

# Karnataka Government Proceedings

**Subject:** Regarding the provision of reservation under Article 16(4) of the Constitution of India in direct recruitment to posts in State Civil Services.

**References:**

(1) Government Order No. Sakai 251 BCA 94 dated 31.01.1995.
(2) Government Order No. CIASUE 8 SEHIMA 95 dated 20.06.1995.
(3) Government Notification No. Sanvyashal 29 Shasana 2022 dated 23.10.2022.
(4) Government Notification No. ___ dated 31.10.2022.

**Proposal:**

In the Government Order dated 31.01.1995 (reference 1), it was decided to fix the reservation quota for backward classes in direct recruitment to posts in State Civil Services and in posts under the control of government organizations at 50%. In light of this, as per Article 16(4) of the Constitution of India, the implementation of this reservation was reviewed, and a 100-point roster system was introduced as mentioned in Annexure-1 of the Government Order dated 20.06.1995 (reference 2). This roster system identifies the positions that need to be filled according to the reservation percentages set for Scheduled Castes, Scheduled Tribes, and other backward classes.

2. In the notification dated 23.10.2022 (reference 3), the Government of Karnataka included Scheduled Castes and Scheduled Tribes (Educational ...)

In the posts within organizations and recruitments or appointments in State services, the Karnataka Scheduled Castes and Scheduled Tribes (Educational and Reservation) Ordinance, 2022 has been issued. In the Notification No. Sakai 84 STP 2021 dated 31.10.2022 (reference 4), it was noted that under sub-clause (2) of the first clause of this ordinance, all sub-sections will come into effect from 01.11.2022.

3. In the 4th clause of the 2022 ordinance, considering that individuals belonging to Scheduled Castes and Scheduled Tribes are socially and educationally backward, the reservation for Scheduled Castes has been increased from 15% to 17% and for Scheduled Tribes from 3% to 7%, respectively, in recruitment or appointments in State services.

4. In light of the above circumstances, the need has arisen to modify the roster system defined in Annexure-1 of the Government Order dated 20.06.1995. Therefore, the following order is issued.

**Government Order No.: CIASUE 01 SEHIMA 2022, Bangalore, Dated: 28.12.2022**

5. Based on the circumstances detailed in the proposal, for the increased reservation percentages allotted to Scheduled Castes and Scheduled Tribes in the ordinance issued on 23.10.2022, the roster points for the vacancies to be filled through direct recruitment will be identified and the 100-point roster in Annexure-1 of the Government Order dated 20.06.1995 will be replaced by the revised roster provided in the annexure to this order.

6. Except for this, there are no changes to the Government Order dated 20.06.1995.

7. This order comes into effect immediately. However, if the direct recruitment process for any cadre has already begun, and if such recruitment process is pending as of the date of this order, that direct recruitment process must be completed according to the roster specified in Annexure-1 of the Government Order dated 20.06.1995.

By the order and in the name of the Governor of Karnataka,

(Veerabhadra)
Under Secretary to the Government,
Personnel and Administrative Reforms Department
(Service-1)
28/12/22

To:

1. Principal Accountant General (GPSA), (I & ERSA), Karnataka, New Building, Audit Bhavan, Bangalore.
2. Principal Accountant General (A & E), Karnataka, Park House Road, Bangalore.
3. Chief Secretary to the Government.
4. Principal Secretary to the Honorable Chief Minister.
All Additional Chief Secretaries/Principal Secretaries/Secretaries to the Government.
6. Resident Commissioner, Karnataka Bhavan, Kautilya Marg, New Delhi.
7. Secretary, Karnataka Legislative Assembly/Legislative Council, Bangalore.
8. Registrar, Karnataka High Court, Bangalore.

# CLARIFICATION

| | | PERCENTAGE WISE RESERVATIONS |
|---|---|---|
| I | CATEGORY 1 | 4 |
| II (A) | CATEGORY – II (A) | 15 |
| II (B) | CATEGORY – II (B) | 4 |
| III(A) | CATEGORY – III (A) | 4 |
| III(B) | CATEGORY – III (B) | 5 |
| SC | SCHEDULE CASTE | 17 |
| ST | SCHEDULE TRIBE | 7 |
| GEN | GENERAL | 44 |
| | **TOTAL** | **100** |

Pushpalatha K R

Translated by,

Pushpalatha K R
Assistant Professor,
Dept. of Kannada

Dr. Chetan bajaj
Principal

PRINCIPAL
R.B.A.N.M'S First Grade College
No. 12, Annaswamy Mudaliar Road,
BANGALORE - 560 042.
Mob : 8048533572

# RBANMS FIRST GRADE COLLEGE

#12, Annaswamy Mudaliar road, Halasuru Bangalore 560042

## No. of Students Admitted from Reserved Categories

| Sl. No | Category | Course | Seats Reserved | Students Admitted | Total Admission |
|---|---|---|---|---|---|
| 1 | SC | BA | 17 | 13 | 74 |
| | | BCom | 34 | 34 | |
| | | BBA | 10 | 10 | |
| | | BCA | 10 | 10 | |
| | | BSc | 7 | 0 | |
| | | MCom | 7 | 7 | |
| 2 | ST | BA | 7 | 0 | 0 |
| | | BCom | 14 | 0 | |
| | | BBA | 4 | 0 | |
| | | BCA | 4 | 0 | |
| | | BSc | 3 | 0 | |
| | | MCom | 3 | 0 | |

| Sl. No | Category | Course | Seats Reserved | Students Admitted | Total Admitted |
|---|---|---|---|---|---|
| 3 | OBC | BA | 32 | 1 | 48 |
| | | BCom | 64 | 22 | |
| | | BBA | 19 | 8 | |
| | | BCA | 19 | 11 | |
| | | BSc | 13 | 0 | |
| | | MCom | 13 | 6 | |

| | |
|---|---|
| Total Seats Reserved - **280** | Total Admitted from Reservation - **122** |

Principal

PRINCIPAL
R.B.A.N.M'S First Grade College
No. 12, Annaswamy Mudaliar Road,
BANGALORE - 560 042.
Mob : 8038533572

RBANM's FIRST GRADE COLLEGE

Student Strength 2023-24

| Coure / Combinat | SC | | ST | | CAT - 1 | | IIA | | IIB | | IIIA | | IIIB | | OBC | | GM | | Total | | GRAND TOTAL |
|---|---|---|---|---|---|---|---|---|---|---|---|---|---|---|---|---|---|---|---|---|---|
| | M | F | M | F | M | F | M | F | M | F | M | F | M | F | M | F | M | F | M | F | |
| I BA | 5 | 8 | 0 | 0 | 0 | 0 | 0 | 0 | 0 | 0 | 0 | 0 | 0 | 0 | 1 | 0 | 9 | 6 | 15 | 14 | 29 |
| I Bcom | 29 | 11 | 0 | 0 | 0 | 0 | 0 | 0 | 0 | 0 | 0 | 0 | 0 | 0 | 18 | 4 | 28 | 9 | 75 | 24 | 99 |
| I BCA | 10 | 4 | 0 | 0 | 0 | 0 | 0 | 0 | 0 | 0 | 0 | 0 | 0 | 0 | 5 | 6 | 20 | 3 | 34 | 14 | 48 |
| I BBA | 8 | 2 | 0 | 0 | 0 | 0 | 0 | 0 | 0 | 0 | 0 | 0 | 0 | 0 | 5 | 3 | 20 | 4 | 33 | 9 | 42 |
| I M.Com | 3 | 4 | 0 | 0 | 0 | 0 | 0 | 0 | 1 | 1 | 1 | 1 | 0 | 2 | 0 | 0 | 0 | 1 | 5 | 9 | 14 |
| TOTAL | 55 | 29 | 0 | 0 | 0 | 0 | 0 | 0 | 1 | 1 | 1 | 1 | 0 | 2 | 29 | 13 | 77 | 23 | 162 | 70 | 232 |

PRINCIPAL
R.B.A.N.M'S First Grade College
No. 12, Annaswamy Mudaliar Road,
BANGALORE - 560 042.